(ಏ) ಇಲಾಖಾ ಅನುದಾನ ಮತ್ತು ಆರೋಗ್ಯ ರಕ್ಷಾ ಸಮಿತಿ ಅನುದಾನದಲ್ಲಿ ಉಪಯುಕ್ತ ಉಪಕರಣಗಳನ್ನು ಪಡೆಯಲಾಗಿದೆ–ಪಟ್ಟಿ ಲಗತ್ತಿಸಿದೆ.

(ಐ) ವಿವಿಧ ವಿಭಾಗಗಳ ನಿರ್ವಹಣೆ ಗಣಕೀಕೃತಗೊಳಿಸುತ್ತಿದೆ.

675 (914) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :– ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಮಾದಿಗ ಜನಾಂಗದವರ ಸಂಘಟನೆಗಳ ಬೇಡಿಕೆಗಳ ವಿವರ ಒದಗಿಸುವುದು ;

ಸರ್ಕಾರಿ ಬೇಡಿಕೆಗಳ ಬಗ್ಗೆ ಸರ್ಕಾರ ಈವರೆಗೆ ಕೈಗೊಂಡಿರುವ ಕ್ರಮವೇನು ;

(ಆ) ಒಳಮೀಸಲಾತಿ ವಿಚಾರದಲ್ಲಿ ರಚಿಸಲಾಗಿದ್ದ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೇ ?

(ಇ) ಸಲ್ಲಿಸಿದ್ದಲ್ಲಿ, ವರದಿಯಲ್ಲಿ ವಿವರ ನೀಡುವುದು, ಸಲ್ಲಿಸದಿದ್ದಲ್ಲಿ ಸಮಿತಿಗಿರುವ ಕಾಲಮಿತಿ ಎಷ್ಟು ?

ಶ್ರೀ ಬಾಲಚಂದ್ರ ಜಾರಕಿಹೋಳಿ (ಸಮಾಜ ಕಲ್ಯಾಣ ಸಚಿವರು) :–

(ಅ) ಮಾದಿಗ ಜನಾಂಗದ ಸಂಘಟನೆಗಳ ಬೇಡಿಕೆಗಳ ವಿವರ ಈ ಕೆಳಕಂಡಂತಿದೆ :

(1) ಪರಿಶಿಷ್ಟ ಜಾತಿಯ ಜನಗಣತಿ ನಡೆಯಬೇಕು. (2) ಪರಿಶಿಷ್ಟರ ಆಯಾ ಜಾತಿಯ ಜನಸಂಖ್ಯೆಗನುಣವಾಗಿ ಶೇ. 15 ರ ಮೀಸಲಾತಿ ಹಂಚಿಕೆಯಾಗಬೇಕು. (3) ಸರ್ಕಾರಿ ಸಾಲ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಆಯಾ ಇಲಾಖಾವಾರು ಬಿಡುಗಡೆಯಾದ ಹಣದಲ್ಲಿ ಜನಸಂಖ್ಯೆಗನುಗುಣವಾಗಿ ಸಾಲ ಸೌಲಭ್ಯ ನೀಡಬೇಕು. (4) ರಾಜ್ಯ ಸರ್ಕಾರವು ನೀಡಿರುವ ಎಲ್ಲಾ ಸೌಲಭ್ಯಗಳು ಪರಿಶಿಷ್ಟ ಜಾತಿಯ ಎಲ್ಲಾ ಕೋಮು, ಜಾತಿ, ವರ್ಗಗಳಿಗೆ ಸಮರ್ಪಕವಾಗಿ ತಲುಪಬೇಕು. ಅದರಲ್ಲಿ ಮಾದಿಗ ಜನಾಂಗಕ್ಕೆ ಶೇ. 80 ರಷ್ಟು ಮೀಸಲಾತಿ ಒದಗಬೇಕು. (5) ರಾಜ್ಯದಲ್ಲಿ ಮಾದಿಗರ ಅಭಿವೃದ್ಧಿಗಾಗಿ ಡಾ॥ ಜಗಜೀವನರಾಂರವರ ಹೆಸರಿನಲ್ಲಿ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. (6) ಇನ್ನು ಮುಂದೆ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಬೇರೆ ಯಾವುದೇ ಜಾತಿಯನ್ನು ಸೇರಿಸಬಾರದು. (7) ಆಂಧ್ರ ಸರಕಾರದ ಮಾದರಿಯಲ್ಲಿ ಜನಸಂಖ್ಯಾಧಾರಿತ ಮೀಸಲಾತಿ ಮಾಡುವುದು. (8) ಖಾಸಗಿ ಕ್ಷೇತ್ರದಲ್ಲಿ ಜನಸಂಖ್ಯಾಧಾರಿತ ಮೀಸಲಾತಿಯನ್ನು ಜಾರಿಗೊಳಿಸುವುದು. (9) ಒಳಮೀಸಲಾತಿಯನ್ನು ಎ,ಬಿ,ಸಿ,ಡಿ ಆಧಾರಿತ ವರ್ಗೀಕರಣ ಮಾಡುವುದು. (10) ಮಾದಿಗ ಜನಾಂಗದ ಅಭಿವೃದ್ಧಿಗಾಗಿ ಪ್ರತ್ಯೇಕ ಪ್ರಾಧಿಕಾರ ನಿರ್ಮಿಸುವುದು. (11) ಮಾದಿಗ

ಜನಾಂಗದಲ್ಲಿ ಆದಿ ಕರ್ನಾಟಕ / ಆದಿ ದ್ರಾವಿಡ ಉಪ ಜಾತಿಗಳಿಗೆ ಪ್ರತ್ಯೇಕವಾಗಿ ಸೌಲಭ್ಯಗಳನ್ನು ಒದಗಿಸುವುದು. (12) ಮೂಲ ಅಸ್ಪೃಶ್ಯರಾದ ಹೊಲೆಯ, ಮಾದಿಗ ದೋರ, ಸಮಗಾರ ಮತ್ತು ಮಚಿಗಾರ ಜನಾಂಗದವರಿಗೆ ಮಾತ್ರ ಒಳ ಮೀಸಲಾತಿಯನ್ನು ನೀಡಿ ಶೇ. 15ರಷ್ಟು ಪ್ರಮಾಣದ ಮೀಸಲಾತಿಯನ್ನು ಹಂಚಿಕೆ ಮಾಡಬೇಕು. ಈ 5 ಜಾತಿಗಳ ಜನಸಂಖ್ಯಾ ಆಧಾರದ ಮೇಲೆ ಶೇ. 15 ಮೀಸಲಾತಿಯಲ್ಲಿ ಒಳಮೀಸಲಾತಿಯನ್ನು ವರ್ಗೀಕರಿಸಬೇಕು. (13) ಶ್ರೀ ನಂಜುಂಡಪ್ಪ ವರದಿಯನ್ನು ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ (1) ಹಿಂದುಳಿದ ಪ್ರದೇಶ (2) ಅತಿ ಹಿಂದುಳಿದ ಪ್ರದೇಶ (3) ಅತ್ಯಂತ ಹಿಂದುಳಿದ ಪ್ರದೇಶ – ಇವುಗಳನ್ನು ಗುರುತಿಸಿದಂತೆ 101 ಪರಿಶಿಷ್ಟ ಜಾತಿಯ ಸಮುದಾಯಗಳಲ್ಲಿ ಮೀಸಲು ಹಂಚಿಕೆಯನ್ನು ಕೂಡ ಈ ಮಾದರಿಯಲ್ಲಿ ಗುರುತಿಸಿದರೆ ಅನುಕೂಲವಾಗುವುದು. (14) ಮೀಸಲಾತಿ ವರ್ಗೀಕರಣ ಜಾರಿಯಾಗುವವರೆಗೆ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಕಾಯ್ದಿರಿಸಲು ಶಿಫಾರಸ್ಸು ಮಾಡುವುದು. (15) ಪ್ರಸ್ತುತ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಒಟ್ಟು 101 ಜಾತಿಗಳಲ್ಲಿ ಮೂಲಭೂತವಾಗಿ ಶೋಷಿತ ತುಳಿತಕ್ಕೊಳಗಾದ ಅಸ್ಪೃಶ್ಯ ಮತ್ತು ಸ್ಪೃಶ್ಯ ಜಾತಿಗಳನ್ನು ವಿಂಗಡಿಸಿ ಅಸ್ಪೃಶ್ಯ ಜಾತಿಗಳಿಗೆ ಪ್ರಥಮ ಆದ್ಯತೆ ನೀಡಬೇಕು. (16) ಶೈಕ್ಷಣಿಕ ಪ್ರಗತಿಗೆ ನವೋದಯ ಮಾದರಿಯ ವಸತಿ ಶಾಲೆಗಳನ್ನು ಸ್ಥಾಪಿಸಬೇಕು. (17) ಆರ್ಥಿಕವಾಗಿ, ಸಾಮಾನ್ಯವಾಗಿ, ಶೈಕ್ಷಣಿಕವಾಗಿ ಅನುಕೂಲತೆಗಳು ಸಿಗಬೇಕು.

ಸದ್ಯಕ್ಕೆ ಜಾರಿಯಲ್ಲಿರುವ ಮೀಸಲಾತಿ ನಿಯಮಗಳ ಪ್ರಕಾರ ಪರಿಶಿಷ್ಟ ಜಾತಿ ಪಟ್ಟಿಯಲ್ಲಿನ ಪ್ರತಿಯೊಂದು ಜಾತಿಯೂ ಪ್ರತ್ಯೇಕವಾಗಿ ಸೌಲಭ್ಯಗಳನ್ನು ಒದಗಿಸಲು ಅವಕಾಶಗಳಿರುವುದಿಲ್ಲ. ಮೀಸಲಾತಿ ಅವಕಾಶವು ನ್ಯಾಯ ಸಮ್ಮತವಾಗಿ ದೊರೆಯದೇ ಇರುವ ಕರ್ನಾಟಕ ರಾಜ್ಯದಲ್ಲಿನ ಅನುಸೂಚಿತ ಜಾತಿಗಳ ನಿರ್ದಿಷ್ಟ ಜಾತಿಗಳು, ಜನಾಂಗಗಳು ಹಾಗೂ ಬುಡಕಟ್ಟುಗಳನ್ನು ಗುರುತಿಸುವುದಕ್ಕೆ ಮತ್ತು ಅವರು ರಾಜ್ಯದಲ್ಲಿನ ಅನುಸೂಚಿತ ಜಾತಿಗಳು ಮತ್ತು ಇತರ ಪ್ರವರ್ಗಗಳಲ್ಲಿ ಸ್ಪರ್ಧಿಸಲು ಸಮರ್ಥಗೊಳಿಸುವುದಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳಬೇಕಾದ ಎಲ್ಲಾ ನಿರ್ದಿಷ್ಟ ಕ್ರಮಗಳ ಬಗ್ಗೆ ಸರ್ಕಾರಕ್ಕೆ ವರದಿ ನೀಡಲು ಎ.ಜೆ. ಸದಾಶಿವ (ನಿವೃತ್ತ) ಅವರನ್ನೊಳಗೊಂಡ ವಿಚಾರಣಾ ಆಯೋಗವನ್ನು ನೇಮಕ ಮಾಡಲಾಗಿದೆ. ಸದರಿ ಆಯೋಗವು ಎರಡು ಸಮೀಕ್ಷಾ ಕಾರ್ಯಗಳನ್ನು ಕೈಗೊಳ್ಳಲು ಉದ್ದೇಶಿಸಿದೆ. ರಾಜ್ಯದಲ್ಲೆ ವಾಸವಿದ್ದು ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಅರೆ ಸರ್ಕಾರಿ ಇಲಾಖೆಗಳು, ಸಹಕಾರಿ ಸಂಸ್ಥೆಗಳ, ಸ್ಥಳೀಯ ಸಂಸ್ಥೆಗಳು, ನಿಗಮ ಮಂಡಳಿಗಳು, ವಿಶ್ವವಿದ್ಯಾಲಯಗಳು ಇತ್ಯಾದಿಗಳಲ್ಲಿ ಸೇವೆಯಲ್ಲಿರುವ ಪರಿಶಿಷ್ಟ ಜಾತಿಗಳ ಅಧಿಕಾರಿ/ಸಿಬ್ಬಂದಿಗಳ ಸಮೀಕ್ಷೆಯನ್ನು ನಡೆಸುತ್ತಿದೆ. ಪರಿಶಿಷ್ಟ ಜಾತಿಯ ಎಲ್ಲಾ ಕುಟುಂಬಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ

ಸ್ಥಿತಿಗತಿಗಳನ್ನು ಅರಿಯಲು ಸಮೀಕ್ಷಾ ಕಾರ್ಯವನ್ನು ನಡೆಸಲು ಉದ್ದೇಶಿಸಿದೆ. ಈ ಎರಡೂ ಸಮೀಕ್ಷಾ ಕಾರ್ಯಗಳು ಪೂರ್ಣಗೊಂಡ ನಂತರ ಸರ್ಕಾರಕ್ಕೆ ವರದಿಯನ್ನು ನೀಡಲಿದ್ದು, ವರದಿಯು ಹಿನ್ನೆಲೆಯಲ್ಲಿ ಪರಿಶೀಲಿಸಿ, ಕ್ರಮ ಜರುಗಿಸಲು ನಿರ್ಧರಿಸಲಾಗುವುದು.

(ಆ) ಒಳಮೀಸಲಾತಿ ವಿಚಾರದಲ್ಲಿ ಇತ್ತೀಚೆಗಷ್ಟೆ ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲಾಗಿದ್ದು, ಇಲ್ಲಿಯವರೆಗೆ ಒಂದು ಬಾರಿ ಸಭೆ ನಡೆಸಿದೆ. ಮುಂದೆ ಸಭೆಗಳನ್ನು ನಡೆಸಿ ತೀರ್ಮಾನ ತೆಗೆದುಕೊಳ್ಳುವುದು.

(ಇ) ವರದಿ ಇನ್ನೂ ಸಲ್ಲಿಸಲ್ಪಟ್ಟಿಲ್ಲ. ಕಾಲಮಿತಿ ನಿಗದಿಯಾಗಿರುವುದಿಲ್ಲ.

ವಿದ್ಯಾರ್ಥಿನಿಲಯದ ಅನುಮೋದನೆಯಾಗದೇ ಇರುವುದು

676 (819) ಶಿವಶಂಕರ್ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) :– ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಗೌರಿಬಿದನೂರು ತಾಲ್ಲೂಕಿನ ಪಟ್ಟಣದಲ್ಲಿ ನಡೆಸಲಾಗುತ್ತಿರುವ ಮೆಟ್ರಿಕ್ ನಂತರದ ಪರಿಶಿಷ್ಟ ಪಂಗಡದ ವಿದ್ಯಾರ್ಥಿನಿಲಯಕ್ಕೆ ಇದುವರೆವಿಗೂ ಅಧಿಕೃತವಾಗಿ ಸರ್ಕಾರದ ಅನುಮೋದನೆಯಾಗದೇ ಇರುವುದು ನಿಜವಲ್ಲವೇ ;

(ಆ) ಈ ವಿದ್ಯಾರ್ಥಿನಿಲಯಗಳಿಗೆ ಅನುಮೋದನೆಯಾಗದೇ ವಿಳಂಬವಾಗುತ್ತಿರಲು ಕಾರಣವೇನು ;

(ಇ) ಹಾಗಿದ್ದಲ್ಲಿ, ಯಾವಾಗ ಅನುಮೋದನೆ ನೀಡಿ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಗುವುದು ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :–

(ಅ) ಹೌದು.

(ಆ) ಪರಿಶೀಲನೆಯಲ್ಲಿದೆ.

(ಇ) ಪರಿಶೀಲನೆಯ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳ ಲಾಗುವುದು.

677 (1132) ಶ್ರೀ ಸಿದ್ದು (ಜಮಖಂಡಿ) :– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದಲ್ಲಿ 2006 ಏಪ್ರಿಲ್‌ದಿಂದ ಆಸ್ಪತ್ರೆಗಳ ದುರಸ್ತಿಗಾಗಿ ಮತ್ತು ಹೊಸ ಕಟ್ಟಡ ನಿರ್ಮಾಣಕ್ಕಾಗಿ ಬಿಡುಗಡೆ ಮಾಡಿದ ಅನುದಾನವೆಷ್ಟು ; (ತಾಲ್ಲೂಕುವಾರು ಮಾಹಿತಿ ಪೂರೈಸುವುದು)

(ಆ) ಜಮಖಂಡಿ ತಾಲ್ಲೂಕಿನಲ್ಲಿ ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಜನರಲ್ ಆಸ್ಪತ್ರೆ ಮತ್ತು ಸಿ.ಹೆಚ್.ಸಿ ಗಳು ದುರಸ್ತಿ ಇಲ್ಲದೇ